ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ:208:ವರ್ಗಾವಣೆ 2017-18:ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:12.05.2017.

## ಸುತ್ತೋಲೆ

ವಿಷಯ: 2017-18ನೇ ಸಾಲಿನ ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರರ ವರ್ಗಾವಣೆಗಳನ್ನು ಕೌನ್ಸಿಲಿಂಗ್ ಮೂಲಕ ನಿರ್ವಹಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:SAMVYASHAE 69 SHASANA 2012, ದಿನಾಂಕ:08.05.2013.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 154 ಡಿಸಿಇ 2013 ದಿನಾಂಕ:01.07.2014.

*****

"ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿ ವರ್ಗಾವಣೆ ನಿಯಂತ್ರಣ) ಕಾಯ್ದೆ -, 2012" ನ್ನು ದಿನಾಂಕ:01.04.2014ರಿಂದ ಜಾರಿಗೆ ತರಲಾಗಿದ್ದು ಸದರಿ ಅಧಿನಿಯಮ ಮತ್ತು ನಿಯಮಗಳನ್ವಯ 2017-18ನೇ ಸಾಲಿನ ಪ್ರಾಂಶುಪಾಲರು, ಬೋಧಕ (ಸಹ/ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರನ್ನೊಳಗೊಂಡಂತೆ) ಮತ್ತು ಬೋಧಕೇತರ ಸಿಬ್ಬಂದಿಗಳ ಕೋರಿಕೆ ವರ್ಗಾವಣೆಗೆ ಅರ್ಜಿಗಳನ್ನು ಈ ಮೂಲಕ ಆಹ್ವಾನಿಸಿದ್ದು, ವರ್ಗಾವಣೆ ಹೊಂದಲಚ್ಛಿಸುವ ಸಿಬ್ಬಂದಿಗಳು (www.dce.kar.nic.in) ರಲ್ಲಿ ಲಭ್ಯವಿರುವ ಇಎಂಐಎಸ್ ತಂತ್ರಾಂಶದ ಮೂಲಕ ವರ್ಗಾವಣೆಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುತ್ತದೆ. ಅರ್ಜಿಗಳನ್ನು ಸಲ್ಲಿಸಲು ಅನುಸರಿಸಬೇಕಾದ ಸೂಚನೆಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ವರ್ಗಾವಣೆ ಅಧಿನಿಯಮದ ನಿಯಮ(3)ರನ್ವಯ ಪ್ರಸ್ತುತ ಇಲಾಖೆಯಲ್ಲಿ ನೇಮಕಾತಿ ಹೊಂದುತ್ತಿರುವ 2160 ಹೊಸ ಸಹಾಯಕ ಪ್ರಾಧ್ಯಾಪಕರುಗಳಿಗೆ 'ಸಿ' ವಲಯದಲ್ಲಿ ನೇಮಕಾತಿಯನ್ನು ನೀಡಬೇಕಾಗಿದ್ದು, ಪ್ರಸ್ತುತ ಸಿ ವಲಯದಲ್ಲಿ ಅಗತ್ಯ ಹುದ್ದೆಗಳನ್ನು ಖಾಲಿ ಮಾಡಲು ಶೇ 8 ರಷ್ಟು ಮಿತಿಯನ್ನು ಮೀರಿ ವರ್ಗಾವಣೆಯನ್ನು ಮಾಡಲು ಸರ್ಕಾರದ ಅನುಮತಿಯನ್ನು ಪಡೆಯಲಾಗಿದ್ದು, ಸರ್ಕಾರದ ಅನುಮತಿಯಂತೆ 'ಸಿ' ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರುಗಳಿಗೆ 'ಬಿ' ಮತ್ತು 'ಎ' ವಲಯಗಳನ್ನು ಆಯ್ಕೆ ಮಾಡಿಕೊಳ್ಳಲು ಹಾಗೂ 'ಬಿ' ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರುಗಳಿಗೆ 'ಎ' ವಲಯದಲ್ಲಿ ಸ್ಥಳ ಆಯ್ಕೆಗೆ ಕೌನ್ಸಿಲಿಂಗ್‌ನಲ್ಲಿ ಅವಕಾಶ ನೀಡಲಾಗಿದೆ. ಈ ಅವಕಾಶವನ್ನು ಉಪಯೋಗಿಸಿಕೊಳ್ಳಲು ಇಚ್ಛಿಸುವ ಬೋಧಕರು ಕೂಡಾ ಅರ್ಜಿಗಳನ್ನು ದಿನಾಂಕ:18.05.2017ರೊಳಗಾಗಿ ಸಲ್ಲಿಸತಕ್ಕದ್ದು. ಶೇ 8 ರಷ್ಟು ಮಿತಿಗೊಳಪಟ್ಟು ವರ್ಗಾವಣೆ ಕೈಗೊಂಡ ನಂತರದಲ್ಲಿ ಈಗಾಗಲೇ ಸಲ್ಲಿಸಲಾಗಿರುವ ಅರ್ಜಿಗಳಲ್ಲಿ ಉಳಿಕೆಯಾಗುವ 'ಬಿ' ಮತ್ತು 'ಸಿ' ವಲಯಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕರುಗಳನ್ನು ಈ ಪ್ರಕ್ರಿಯೆಯಲ್ಲಿ ಕೌನ್ಸಿಲಿಂಗ್‌ಗೆ ಆಹ್ವಾನಿಸಲಾಗುವುದು. ಇದಕ್ಕೆ ಪ್ರತ್ಯೇಕವಾಗಿ ಅರ್ಜಿಗಳನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಅದೇ ಸ್ಥಳದಲ್ಲಿ ಮುಂದುವರೆಯಲಚ್ಛಿಸುವ ಬೋಧಕರುಗಳು ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ವರ್ಗಾವಣೆ ವೇಳಾಪಟ್ಟಿಯನ್ನು ಅನುಬಂಧ-2ರಲ್ಲಿ ಪ್ರಕಟಿಸಲಾಗಿದ್ದು, ಅದರಂತೆ ವರ್ಗಾವಣೆಗಳನ್ನು ಕೈಗೊಳ್ಳಲಾಗುವುದು.

12/5/17

ಕಾಲೇಜು ಶಿಕ್ಷಣ ಆಯುಕ್ತರು.

**ಇವರಿಗೆ:**

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ - ತುರ್ತು ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು - ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

*circular transfer 17-18.doc*

**ಅನುಬಂಧ-01**

## ಕೋರಿಕೆ ವರ್ಗಾವಣೆಗೆ ಅರ್ಜಿಗಳನ್ನು ಸಲ್ಲಿಸಲು ಸೂಚನೆಗಳು

1. 2017-18ನೇ ಸಾಲಿಗೆ ತೀವ್ರತರ ಕಾಯಿಲೆ ಪ್ರಕರಣ, ಅಂಗವಿಕಲ ಪ್ರಕರಣ, ವಿಧವಾ ಪ್ರಕರಣ ಹಾಗೂ ಪತಿ-ಪತ್ನಿ ಪ್ರಕರಣಗಳ ವರ್ಗಾವಣೆಗಳನ್ನು ಕೋರಿಕೆ ಮತ್ತು ಕಡ್ಡಾಯ ವರ್ಗಾವಣೆಗಳೂ ಸೇರಿ ತಲಾ ಶೇ.1 ರಂತೆ ವಲಯವಾರು ವೃಂದ ಬಲದ ಒಟ್ಟು ಶೇ.4 ಕ್ಕೆ ಸೀಮಿತಗೊಳಿಸಲಾಗುವುದು.

2. 2017-18ನೇ ಸಾಲಿಗೆ ವರ್ಗಾವಣೆ ಬಯಸುವ ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಅಂತರ್ಜಾಲದ (www.dce.kar.nic.in) ಮೂಲಕ ಮಾತ್ರವೇ ಅರ್ಜಿ ಸಲ್ಲಿಸಬಹುದು. ಈ ವರ್ಗಾವಣೆಗೆ ಸೇವಾಪೂರ್ವ ಅವಧಿ ತೃಪ್ತಿಕರವಾಗಿ ಪೂರೈಸಿ ಘೋಷಿಸಲ್ಪಟ್ಟ ಹಾಗು ವರ್ಗಾವಣೆ ನಿಯಮಗಳನ್ವಯ ಕನಿಷ್ಠ ಅವಧಿ ಪೂರೈಸಿರುವ ಬೋಧಕ ಮತ್ತು ಬೋಧಕೇತರರು ಮಾತ್ರ ಅರ್ಹರಿರುತ್ತಾರೆ.

3. **ವರ್ಗಾವಣೆ ಕೋರಿಕೆ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸಲು ಪ್ರಾರಂಭಿಸುವ ದಿನಾಂಕ:12-5-2017.**

4. **ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:18-05-2017.**

5. ವಿಶೇಷ ಪ್ರಕರಣದಡಿಯಲ್ಲಿ 01 ಕ್ಕಿಂತ ಹೆಚ್ಚು ಪ್ರಕರಣಗಳಲ್ಲಿ ಕೋರಿಕೆ ಸಲ್ಲಿಸಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಆಯಾಯಾ ವಿಶೇಷ ಪ್ರಕರಣಗಳ ಜೇಷ್ಟತಾ ಪಟ್ಟಿ ಅನುಸಾರ ಮಾತ್ರ ಜೇಷ್ಟತೆಯನ್ನು ಪರಿಗಣಿಸಲಾಗುತ್ತದೆ.

6. ನಿಯಮ 11 ರ (3) (ಸಿ) ರಂತೆ ಆದ್ಯತೆ ಪ್ರಕಟಿಸಲಾಗುವುದು.

7. ಅಧಿನಿಯಮ 9(1)ರಲ್ಲಿ ಪತಿ-ಪತ್ನಿ ಪ್ರಕರಣದಡಿ ಅರ್ಜಿ ಸಲ್ಲಿಸಬಯಸಿದಲ್ಲಿ, ಪತಿ/ಪತ್ನಿ ರಾಜ್ಯ ಸರ್ಕಾರಿ ಉದ್ಯೋಗದಲ್ಲಿರುವ ಬಗ್ಗೆ ನಿಗದಿಪಡಿಸಿದ ನಮೂನೆಯಲ್ಲಿ ದೃಢೀಕರಣ ನೀಡತಕ್ಕದ್ದು.

8. ಅಧಿನಿಯಮ 9(3)ರಂತೆ ದೈಹಿಕ ಅಂಗವಿಕಲ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಬಯಸಿದಲ್ಲಿ, ಶೇ.40ಕ್ಕಿಂತ ಹೆಚ್ಚಿನ ದೈಹಿಕ ಅಶಕ್ತತೆ ಇರುವ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಪ್ರಮಾಣೀಕರಿಸಿದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸುವುದು.

9. ಅಧಿನಿಯಮ 9 (4) ರಂತೆ ವೈದ್ಯಕೀಯ ಕಾರಣ ಮೇಲೆ ಅರ್ಜಿ ಸಲ್ಲಿಸಿದ್ದಲ್ಲಿ, ಬೋಧಕ/ಬೋಧಕೇತರ ಸಿಬ್ಬಂದಿಗಳ ಪತಿ/ಪತ್ನಿ/ಮಕ್ಕಳು ಗಂಭೀರ ಖಾಯಿಲೆಯಿಂದ ಬಳಲುತ್ತಿದ್ದಲ್ಲಿ ಮತ್ತು ಅದಕ್ಕೆ ವೈದ್ಯಕೀಯ ಚಿಕಿತ್ಸೆಯು ಸಿಬ್ಬಂದಿಯು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ದೊರೆಯದಿದ್ದಲ್ಲಿ ಮತ್ತು ಅವನಿಗೆ/ಅವಳಿಗೆ ವೈದ್ಯಕೀಯ ಚಿಕಿತ್ಸೆ ದೊರೆಯುವಂಥ ಸ್ಥಳಕ್ಕೆ ವರ್ಗಾವಣೆ ಪಡೆಯುವುದು ಅವಶ್ಯಕವಾಗಿದ್ದಲ್ಲಿ, ಚಿಕಿತ್ಸೆಯ ಸ್ವರೂಪ, ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಸಂಬಂಧಪಟ್ಟ ಖಾಯಿಲೆಗೆ ವೈದ್ಯಕೀಯ ಚಿಕಿತ್ಸೆ ದೊರೆಯದೇ ಇರುವಬಗ್ಗೆ ಹಾಗೂ ಅಂತಹ ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ಮತ್ತು ಬೋಧಕ/ಬೋಧಕೇತರ ಸಿಬ್ಬಂದಿಗಳು ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವರನ್ನು ಅಂತಹ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಿದೆ ಎಂಬುದರ ಬಗ್ಗೆ ನಿರ್ದಿಷ್ಟವಾಗಿ ಜಿಲ್ಲಾ ವೈದ್ಯಕೀಯ ಮಂಡಳಿಯು ಪ್ರಮಾಣಿಸಲ್ಪಟ್ಟ ಹಾಗೂ ಪ್ರಸಕ್ತ ಸಾಲಿಗೆ ಚಾಲ್ತಿಯಲ್ಲಿರುವ ಪ್ರಮಾಣ ಪತ್ರವನ್ನು ಹಾಜರುಪಡಿಸಿದಲ್ಲಿ ಮಾತ್ರ ವೈದ್ಯಕೀಯ ಪ್ರಕರಣದಲ್ಲಿ ಪರಿಗಣಿಸಲಾಗುವುದು (ನಮೂನೆ-3).

10. ಪತಿ-ಪತ್ನಿ ಪ್ರಕರಣದಡಿ (ರಾಜ್ಯ/ಕೇಂದ್ರ ಸರ್ಕಾರಿ ನೌಕರರಾಗಿದ್ದ ಮಾತ್ರ) ಅರ್ಜಿ ಸಲ್ಲಿಸಿದ್ದಲ್ಲಿ ಪತಿ/ಪತ್ನಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಹುದ್ದೆ ಖಾಲಿ ಇದ್ದಲ್ಲಿ ಅಂತಹ ಸ್ಥಳವನ್ನೇ ಆಯ್ಕೆ ಮಾಡಿಕೊಳ್ಳತಕ್ಕದ್ದು, ಬೇರೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಒಂದು ವೇಳೆ ಪತಿ/ಪತ್ನಿ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಹುದ್ದೆ ಖಾಲಿ ಇಲ್ಲದಿದ್ದಲ್ಲಿ ಸಮೀಪದ ಖಾಲಿ ಇರುವ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಪತಿ-ಪತ್ನಿ ಇಬ್ಬರೂ ಕಾಲೇಜು ಶಿಕ್ಷಣ ಇಲಾಖೆಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಇಬ್ಬರಲ್ಲಿ ಒಬ್ಬರು ಮಾತ್ರ ವರ್ಗಾವಣೆಗೆ ಅರ್ಜಿ ಸಲ್ಲಿಸತಕ್ಕದ್ದು.

11. ವಿಧವಾ ಪ್ರಕರಣದಡಿ ಅರ್ಜಿ ಸಲ್ಲಿಸಬಯಸಿದಲ್ಲಿ, ಪತಿಯ ಮರಣ ಸಮರ್ಥನಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸುವುದು.

12. ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿ ವರ್ಗಾವಣೆ ನಿಯಂತ್ರಣ) ಕಾಯ್ದೆ" 2012 ಹಾಗೂ ನಿಯಮ 2014ನ್ನು ಇಲಾಖೆಯ ಅಂತರ್ಜಾಲ (www.dce.kar.nic.in) ರಲ್ಲಿ ಅಳವಡಿಸಿದೆ ಅಧಿನಿಯಮ ಮತ್ತು ನಿಯಮಗಳನ್ನು ಪರಿಶೀಲಿಸಬಹುದು.

13. ವರ್ಗಾವಣೆ ಕೋರಿ ಯಾವುದೇ ಬೋಧಕ ಸಿಬ್ಬಂದಿ ಅರ್ಜಿ ಸಲ್ಲಿಸಿದಲ್ಲಿ ಸಂಬಂಧಪಟ್ಟ ಕಾಲೇಜಿನಲ್ಲಿ ಖಾಲಿ ಹುದ್ದೆಯೊಂದಿಗೆ ಸದರಿ ವಿಷಯದಲ್ಲಿ ಅಗತ್ಯ ಕಾರ್ಯಭಾರದ ಲಭ್ಯತೆ ಇದ್ದಲ್ಲಿ ಮಾತ್ರ ಅಂತಹ ಖಾಲಿ ಹುದ್ದೆಗೆ ಎದುರಾಗಿ ನಿಯಮಾನುಸಾರ ವರ್ಗಾವಣೆಗೆ ಅರ್ಜಿಯನ್ನು ಪರಿಗಣಿಸಲಾಗುವುದು.

14. ಬೋಧಕ ಹಾಗೂ ಬೋಧಕೇತರರ ವರ್ಗಾವಣೆಗೆ ಸಂಬಂಧಿಸಿದಂತೆ ಇಲಾಖೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

**<u>ವರ್ಗಾವಣೆ ಸಂಬಂಧ ಪರಿಶೀಲಿಸಲು ಸಲ್ಲಿಸಬೇಕಾದ ದಾಖಲೆಗಳ ವಿವರ:</u>**

*1. ಬೋಧಕ/ಬೋಧಕೇತರ ಹುದ್ದೆಯಲ್ಲಿ ಪರೀಕ್ಷಾರ್ಥ ಅವಧಿ ತೃಪ್ತಿಕರವಾಗಿ ಪೂರೈಸಿದ ಬಗ್ಗೆ ಘೋಷಿಸಿದ ಆದೇಶದ ಪ್ರತಿ. ಆದೇಶದ ಪ್ರತಿ ಲಭ್ಯವಿಲ್ಲದಿದ್ದಲ್ಲಿ ಸೇವಾ ಪುಸ್ತಕದಲ್ಲಿ ನಮೂದಿಸಿರುವ ದಾಖಲೆ ಆಧಾರದ ಮೇಲೆ ಪ್ರಾಚಾರ್ಯರಿಂದ ಪರೀಕ್ಷಾರ್ಥ ಅವಧಿ ಪೂರೈಸಿರುವ ಬಗ್ಗೆ ಮೂಲ ಪ್ರಮಾಣ ಪತ್ರ ಸಲ್ಲಿಸಬೇಕು (ನಮೂನೆ-3).*

*2. ವೈದ್ಯಕೀಯ ಆದ್ಯತೆ ಕೋರಿದ್ದಲ್ಲಿ, ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಶಸ್ತ್ರಚಿಕಿತ್ಸೆ ಈ ಖಾಯಿಲೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆಯಲಾಗಿರುವ ದೃಢೀಕೃತ ಮೂಲ ವೈದ್ಯಕೀಯ ಪ್ರಮಾಣ ಪತ್ರ.*

*3. ಅಂಗವಿಕಲ ಆದ್ಯತೆ ಕೋರಿದ್ದಲ್ಲಿ ಶೇ 40ಕ್ಕಿಂತ ಹೆಚ್ಚಿನ ಅಶಕ್ತತೆ ಹೊಂದಿರುವ ಬಗ್ಗೆ ಜಿಲ್ಲಾ ಶಸ್ತ್ರ ವೈದ್ಯರು ನೀಡಿರುವ ಮೂಲ ಪ್ರಮಾಣ ಪತ್ರ ಮತ್ತು ಒಂದು ಫೋಟೋ ಪ್ರತಿ (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ).*

*4. ವಿಧವಾ ಪ್ರಕರಣದಡಿಯಲ್ಲಿ ಆದ್ಯತೆ ಪಡೆದಿದ್ದಲ್ಲಿ ಪತಿಯ ಮರಣ ಸಮರ್ಥನಾ ಮೂಲ ಪ್ರಮಾಣ ಪತ್ರ ಮತ್ತು ಒಂದು ಫೋಟೋ ಪ್ರತಿ (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ).*

*5. ಪತಿ-ಪತ್ನಿ ಪ್ರಕರಣದಲ್ಲಿ ಆದ್ಯತೆ ಪಡೆದಿದ್ದಲ್ಲಿ (ರಾಜ್ಯ/ಕೇಂದ್ರ ಸರ್ಕಾರಿ ನೌಕರರಾಗಿದ್ದಲ್ಲಿ ಮಾತ್ರ) ಆದ್ಯತೆಯನ್ನು ಕೋರಬಹುದಾಗಿದೆ. ಅಂತಹ ಪ್ರಕರಣಗಳಲ್ಲಿ ಪತಿ/ಪತ್ನಿಯ ಕೆಜಿಐಡಿ ಸಂಖ್ಯೆಯನ್ನೊಳಗೊಂಡಂತೆ (ರಾಜ್ಯ ಸರ್ಕಾರಿ ನೌಕರರಿಗೆ ಮಾತ್ರ) ಸಂಬಂಧಿಸಿದ ಕಛೇರಿ ಮುಖ್ಯಸ್ಥರಿಂದ ಪಡೆದ ಮೂಲ ಪ್ರಮಾಣ ಪತ್ರ.*

*6. ಕೌನ್ಸಿಲಿಂಗ್ ಹಾಜರಾಗುವ ಬೋಧಕ/ಬೋಧಕೇತರ ಸಿಬ್ಬಂದಿ ಕಡ್ಡಾಯವಾಗಿ ಇಲಾಖೆಯು ನೀಡಿರುವ ಭಾವಚಿತ್ರವುಳ್ಳ ಗುರುತಿನ ಪತ್ರ ಅಥವಾ ಪ್ರಾಚಾರ್ಯರಿಂದ ದೃಢೀಕರಿಸಿದ ಇತ್ತೀಚಿನ ಭಾವಚಿತ್ರವುಳ್ಳ ಗುರುತಿನ ಪತ್ರವನ್ನು ಕಡ್ಡಾಯವಾಗಿ ತರತಕ್ಕದ್ದು.*

*7. ಅನ್ವಯಿಸುವ ದಾಖಲೆಗಳನ್ನು ಹಾಜರುಪಡಿಸದಿದ್ದಲ್ಲಿ ಅಥವಾ ಅಪೂರ್ಣ ಮಾಹಿತಿ ನೀಡಿದಲ್ಲಿ ಅಂತಹ ವರ್ಗಾವಣೆ ಅರ್ಜಿಯನ್ನು ತಿರಸ್ಕರಿಸಲಾಗುವುದು.*

*8. ವರ್ಗಾವಣೆಗೆ ಸಂಬಂಧಿಸಿದಂತೆ ಯಾವುದೇ ಸುಳ್ಳು/ತಪ್ಪು ಮಾಹಿತಿ ನೀಡಿದ್ದಲ್ಲಿ ಶಿಸ್ತುಕ್ರಮಕ್ಕೆ ಗುರಿಪಡಿಸಲಾಗುವುದು.*

12/5/17

**ಕಾಲೇಜು ಶಿಕ್ಷಣ ಆಯುಕ್ತರು.**

*circular transfer 17-18.doc*

ಅನುಬಂಧ-2

## ಎ.ಕಡ್ಡಾಯ ವರ್ಗಾವಣೆ ವೇಳಾಪಟ್ಟಿ

| ಕ್ರ. ಸಂ | ವಿವರಗಳು | ದಿನಾಂಕ |
|---|---|---|
| 1 | ವಿಶೇಷ ಪ್ರಕರಣಗಳು<br>(ಹೈದ್ರಾಬಾದ್ ಕರ್ನಾಟಕ ಮತ್ತು ರಾಜ್ಯ ವ್ಯಾಪಿ ಉಳಿಕೆ ಮೂಲ ವೃಂದಕ್ಕೆ ಸೇರಿದ<br>ಬೋಧಕರು/ ದೈ.ಶಿ.ನಿರ್ದೇಶಕರು/ಗ್ರಂಥಪಾಲಕರು) | 15/05/2017 |
| 2 | ಸಾಮಾನ್ಯ ಪ್ರಕರಣಗಳು<br>1. ಎ ವಲಯದ ರಾಜ್ಯವ್ಯಾಪಿ ಉಳಿಕೆ ವೃಂದದ ಬೋಧಕರು.<br>2. ಬಿ ವಲಯದ ರಾಜ್ಯ ವ್ಯಾಪಿ ಉಳಿಕೆ ವೃಂದದ ಬೋಧಕರು. | 17/05/2017 |
| 3 | ಸಾಮಾನ್ಯ ಪ್ರಕರಣಗಳು<br>1. ಸಿ ವಲಯದ ರಾಜ್ಯ ವ್ಯಾಪಿ ಉಳಿಕೆ ವೃಂದದ ಬೋಧಕರು.<br>2. ಎ, ಬಿ, ಸಿ ವಲಯಗಳ (ಹೈದ್ರಾಬಾದ್ ಕರ್ನಾಟಕ) ಸ್ಥಳೀಯ ವೃಂದದ ಬೋಧಕರು.<br>3. ಎ, ಬಿ, ಸಿ ವಲಯಗಳ ಹೈದ್ರಾಬಾದ್ ಕರ್ನಾಟಕ ವೃಂದ ಮತ್ತು ರಾಜ್ಯ ವ್ಯಾಪಿ ಉಳಿಕೆ ವೃಂದಗಳ ದೈ.ಶಿ.ನಿರ್ದೇಶಕರು ಮತ್ತು ಗ್ರಂಥಪಾಲಕರು . | 18/05/2017 |

## ಬಿ.ಕೋರಿಕೆ ವರ್ಗಾವಣೆಯ ತಾತ್ಕಾಲಿಕ ವೇಳಾಪಟ್ಟಿ

| ಕ್ರ. ಸಂ | ವಿವರಗಳು | ದಿನಾಂಕ |
|---|---|---|
| 1 | ಅರ್ಜಿಗಳ ಆಹ್ವಾನ | 12/05/2017 ರಿಂದ 18/05/2017 |
| 2 | ತಾತ್ಕಾಲಿಕ ಜೇಷ್ಟತಾ ಪಟ್ಟಿ ಪ್ರಕಟಣೆ | 19-20/05/2017 |
| 3 | ತಾತ್ಕಾಲಿಕ ಜೇಷ್ಟತಾ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಧಿ | 20/05/2017 ರಿಂದ 23/05/2017 |
| 4 | ಅಂತಿಮ ಜೇಷ್ಟತಾ ಪಟ್ಟಿ ಪ್ರಕಟಣೆ | 25/05/2017 |
| 5 | ವಿಶೇಷ ಪ್ರಕರಣಗಳ ಕೌನ್ಸಿಲಿಂಗ್ **** | 27/05/2017 |
| 6 | ಸಾಮಾನ್ಯ ಪ್ರಕರಣಗಳ ಕೌನ್ಸಿಲಿಂಗ್ (ಶೇ 08 ರ ಮಿತಿಗೊಳಪಟ್ಟು) **** | 28/05/2017 ರಿಂದ 29/05/2017 |
| 7 | ಹೊಸ ನೇಮಕಾತಿಗಳಿಗೆ ಸಿ ವಲಯದ ಹುದ್ದೆಗಳನ್ನು ಖಾಲಿ ಮಾಡುವ ಸಂಬಂಧ ನಡೆಸುವ ಕೌನ್ಸಿಲಿಂಗ್ **** | 30/05/2017 ರಿಂದ 31/05/2017 |

****** ವಿವರವಾದ ವೇಳಾಪಟ್ಟಿಯನ್ನು ಅಂತಿಮ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಪ್ರಕಟಿಸಲಾಗುವುದು.**